

ಸೌಂಡ್ ಮತ್ತು ರೆಕಾರ್ಡಿಂಗ್ ತಂತ್ರಜ್ಞಾನ ಬಳಸಿ ತಲ್ಲೂರ್ ರೂಪಿಸಿದ 'ಇಂಟರ್‌ಫಿಯರೆನ್ಸ್' ಕಲಾಕೃತಿ

ಇವುಗಳ ಮಧ್ಯದ ಸ್ಪೇಸನ್ನು ಮರೆಯುತ್ತೇವೆ. ಹಾಗಾಗಿ, ಯಾವುದೇ ಆರ್ಟ್ ಎಕ್ಸ್‌ಪೀರಿಯನ್ಸ್ ಆದ್ರು ಕೂಡ, ಅದನ್ನ ಅನುಭವಿಸೋದನ್ನು ನಿಧಾನಕ್ಕೆ ಕಡಿಮೆ ಮಾಡುತ್ತೇವೆ. ಯಾತಕ್ಕಂತಂದ್ರೆ ನಮಗೆ ಯೋಚನೆ ಮಾಡುವ ಬೇರೆ ಮಾಧ್ಯಮ ಡಾಮಿನೇಟ್ ಮಾಡ್ತಾಯಿದೆ. ನಾವೀಗ ಹೋಗಿ ಒಬ್ಬರ ಕೈ ಹಿಡಿತೇವೆ. ಹೆಚ್ಚು ಮಾತಾಡೋದಿಲ್ಲ. ಆದರೂ ಆ ವ್ಯಕ್ತಿ ನನಗೆ ಇವರು ಸಪೋರ್ಟ್ ಮಾಡ್ತಿದ್ದಾರೆ ಅಂತ ಫೀಲ್ ಮಾಡ್ತಾನೆ. ಇಂತಹ ನಾನ್ ವರ್ಬಲ್ ಸಿಗ್ನಲ್ಸ್ ತುಂಬಾ ಇವೆ. ಅವುಗಳ ಬಗ್ಗೆ ಚಿಂತನೆ ಮಾಡ್ಲಿಕ್ಕೆ ಕಲಾಕೃತಿಗಳು ಪ್ರೇರಣೆ ಕೊಡಬಹುದು.

**◆ ನಿಮಗೆ ಕಲಿಸಿದ ಗುರುಗಳ ಬಗ್ಗೆ ಕೇಳಬೇಕು ಅನಿಸ್ತಿದೆ.**

ಮೈಸೂರಿನ 'ಕಾವಾ'ದಲ್ಲಿ ಕಲೀತಾ ಇರುವಾಗ ಒಬ್ಬ ಶಿಕ್ಷಕರಿದ್ದರು – ಉಲ್ಲಾಸ್ ಸಾಂಝಗಿರಿ ಅಂತ. ಗೋವಾದವರು. ಬನಾರಸ್, ಗೋವಾ, ಮುಂಬೈನಲ್ಲಿ ಕಲ್ತು ಬಂದಿದ್ರು. ಅವರು ಎಲ್ಲರಿಗೂ ಒಂದೇ ತರಹ ಪಾಠ ಮಾಡ್ತಾ ಇರಲಿಲ್ಲ. ಪ್ರತಿಯೊಬ್ಬರ ಅಗತ್ಯ ಏನು ಅಥವಾ ಅವರ ಹತ್ರ ಏನು ಸಾಮರ್ಥ್ಯ ಇದೆ ಅದನ್ನು ವಿವರಿಸಿ, ಕನ್ವಿನ್ಸ್ ಮಾಡ್ಲಿಕ್ಕೆ ಪ್ರಯತ್ನ ಮಾಡ್ತಿದ್ರು. ಆರಂಭದಲ್ಲಿ ಅರ್ಥ ಆಗ್ತಿರ್ಲಿಲ್ಲ. ಕಾಲ ಕಳೀತಾಯಿದ್ದ ಹಾಗೆ ಇದು ಹಾಗಲ್ಲ ಅಂತ ಗೊತ್ತಾಯ್ತು.

**◆ ಕಲಾಶಿಕ್ಷಕರಾದ ಬಳಿಕ ಈ ವಿಧಾನ ಪ್ರಯೋಗಿಸಿದಿರಾ?**

ಹೌದು, ವಿಸಿಟಿಂಗ್ ಫ್ಯಾಕಲ್ಟಿಯಾಗಿ ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಕೆಲಸ ಮಾಡುವಾಗ ಇದನ್ನ ಪ್ರಯೋಗಿಸಿದೆ. ಎಲ್ಲ ವಿದ್ಯಾರ್ಥಿಗಳಿಗೂ ಅವರದ್ದೇ ಆದ ವ್ಯಕ್ತಿತ್ವ, ವೈಯಕ್ತಿಕ ಗುಣಸ್ವಭಾವ, ಸಾಮರ್ಥ್ಯ, ಥಿಂಕಿಂಗ್ ಪ್ರಾಸೆಸ್, ಕೆಲಸ ಮಾಡೋ ರೀತಿ ಇರುತ್ತೆ. ಅವರಿಗೆ ಮಾರ್ಗದರ್ಶನ ಮಾಡಬೇಕಾದ್ರೆ ಅವರನ್ನು ಅರ್ಥ ಮಾಡಿಕೊಂಡು ಅವರಲ್ಲಿರೊ ಸಾಧ್ಯತೆಯನ್ನು ಎಕ್ಸ್‌ಪ್ಲೋರ್ ಮಾಡಬೇಕಾಗುತ್ತೆ. ಒಬ್ಬರನ್ನೊಬ್ಬರು